ಅದರಲ್ಲಿರತಕ್ಕಂಥಾದ್ದು 16 ಜನ ಬಂಧಿಗಳು ಇರುವುದಕ್ಕೆ ಮಾತ್ರ ಅವಶ್ಯಕತೆ ಇರುವುದು. ಅಲ್ಲಿ 3 ಕೊಠಡಿಗಳು ಸಹ ಇದೆ ಎಂದು ತಾವು ಉತ್ತರ ಕೊಟ್ಟಿದ್ದೀರಿ. ಈಗ ಹಾಲಿ ಅಲ್ಲಿ 80 ಜನ ಇದ್ದಾರೆ. ಆದ್ದರಿಂದ ನಾನು ಇವತ್ತು ಸರ್ಕಾರವನ್ನು ಮಾನ್ಯ ಅಧ್ಯಕ್ಷರ ಮೂಲಕ ಒತ್ತಾಯಿಸುತ್ತಿದ್ದೇನೆ. ಆದಷ್ಟು ಬೇಗ ಈ ಜಾಗವನ್ನು ತಾವು ವಶಪಡಿಸಿಕೊಂಡು ಹೊಸ ಕಾರಾಗೃಹ ಕಟ್ಟಡ ಕಟ್ಟಬೇಕೆಂದು ಹೇಳಿ ಒತ್ತಾಯಿಸುತ್ತೇನೆ.

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಯವರು) : ಮಾನ್ಯ ಅಧ್ಯಕ್ಷರೆ, ಈಗಾಗಲೇ ಮೂರು ಎಕರೆ ಜಮೀನು ಅಣಕನೂರು ಗ್ರಾಮದಲ್ಲಿ ಗುರುತಿಸಲಾಗಿದೆ. ನಕ್ಷೆ ರೆಡಿಯಾಗಿದೆ. ಕಟ್ಟಡ ಕಟ್ಟಿಸತಕ್ಕಂಥ ಕೆಲಸವನ್ನೂ ಕೂಡ ಪ್ರಾರಂಭ ಮಾಡುತ್ತೇವೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೆ, ಒಂದು ಕಡೆ ಇವರು ಎಲ್ಲಾ ಕೇಸ್ ವಿತ್‌ಡ್ರಾ ಮಾಡಿಕೊಳ್ಳಿ ಎಂದು ಹೇಳುತ್ತಾರೆ. ಅವರು ಜೈಲ್ ಕಟ್ಟಿಸಿ ಎಂದು ಹೇಳುತ್ತಾರೆ, ಯಾರಿಗೋಸ್ಕರ? ವಾಟಾಳ್ ನಾಗರಾಜ್ ಅಂತೂ ಆ ಕಡೆ ಹೋಗುವುದಿಲ್ಲ.

ಪ್ರಶ್ನೆ ಸಂಖ್ಯೆ : 416(5390)

(ಮಾನ್ಯ ಸದಸ್ಯರ ಪ್ರಶ್ನೆಯನ್ನು ಬೇರೆ ಇಲಾಖೆಗೆ ವರ್ಗಾವಣೆಯಾಗಿದೆ)

ಉಡುಪಿ ಜಿಲ್ಲೆಯಲ್ಲಿ ಕೆರೆಗಳ ಹೂಳೆತ್ತುವ ಕಾರ್ಯಕ್ರಮಗಳು

417 (4785) ಶ್ರೀ ಜಯಪ್ರಕಾಶ್ ಹೆಗ್ಡೆ ಕೆ. (ಬ್ರಹ್ಮಾವರ) :– ಮಾನ್ಯ ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉಡುಪಿ ಜಿಲ್ಲೆಯಲ್ಲಿ ಹೂಳೆತ್ತುವ ಕಾರ್ಯಕ್ರಮವನ್ನು ಕೈಗೊಂಡಿರುವ ಕೆರೆಗಳ ಸಂಖ್ಯೆ ಎಷ್ಟು? (ವಿಧಾನಸಭಾ ಕ್ಷೇತ್ರವಾರು ವಿವರ ನೀಡುವುದು)

ಆ) ಅನುಷ್ಠಾನಗೊಳಿಸಲಾಗಿರುವ ಯೋಜನೆಗಳ ಸಂಖ್ಯೆ ಎಷ್ಟು? (ಕ್ಷೇತ್ರವಾರು ವಿವರ ನೀಡುವುದು)

ಇ) ಸದರಿ ಯೋಜನೆಗಳನ್ನು ತ್ವರಿತವಾಗಿ ಪೂರ್ಯೆಸಲಾಗುವುದೇ?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು):

ಅ) ಉಡುಪಿ ಜಿಲ್ಲೆಯಲ್ಲಿ ಸಣ್ಣ ನೀರಾವರಿ ವ್ಯಾಪ್ತಿಗೆ ಬರುವ ಎಲ್ಲಾ 4 ಕೆರೆಗಳಲ್ಲಿ ಹೂಳೆತ್ತುವ ಅಂಶವನ್ನು ಒಳಗೊಂಡು ಅಭಿವೃದ್ಧಿ ಕಾರ್ಯವನ್ನು ಈಗಾಗಲೇ ಕೈಗೊಳ್ಳಲಾಗಿದೆ. ವಿವರಗಳು ಈ ಕೆಳಕಂಡಂತಿದೆ :

ಕ್ರ.ಸಂ.	ವಿಧಾನಸಭಾ ಕ್ಷೇತ್ರ	ಕೆರೆಗಳ ಸಂಖ್ಯೆ
1	ಬ್ರಹ್ಮಾವರ	1
2	ಕುಂದಾಪುರ	1
3	ಕಾರ್ಕಳ	1
4	ಬೈಂದೂರು	1

ಆ) ನಾಲ್ಕು ಕೇತ್ರವಾರು ವಿವರ ಮೇಲೆ ನೀಡಿದಂತಿದೆ.

ಇ) ಈಗಾಗಲೇ ಪೂರ್ಣಗೊಂಡಿದೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಮಾನ್ಯ ಅಧ್ಯಕ್ಷರೇ, ಉತ್ತರ ಒದಗಿಸಿದ್ದಾರೆ. ಒಟ್ಟಾರೆ ಜಿಲ್ಲೆಯಲ್ಲಿ 6 ಕ್ಷೇತ್ರ ಇದೆ. ನಾಲ್ಕು ಕ್ಷೇತ್ರಕ್ಕೆ ಒಂದೊಂದು ಕಾಮಗಾರಿ ಇದುವರೆಗೂ ಆಗಿದೆ ಎಂದು ಉತ್ತರ ಕೊಟ್ಟಿದ್ದಾರೆ. ಹೂಳು ಎತ್ತುವ ಕಾರ್ಯಕ್ರಮ. ಅಂದರೆ ಇರುವ ಕೆರೆಗಳು ಒಂದೊಂದೇ ಕೆರೆ ಇದೆಯೇ ಅಥವಾ ಇನ್ನೂ ಏನಾದರೂ ಹೆಚ್ಚು ಕೊಡುವ ಆಲೋಚನೆ ಸರ್ಕಾರಕ್ಕೆ ಇದೆಯೇ? ಏಕೆಂದರೆ ನಮ್ಮಲ್ಲಿ ಮಾನ್ಯ ರಘುಪತಿಭಟ್‌ರವರಿಗೆ ತಾವು ಉತ್ತರ ಕೊಡುವಾಗ ಹೇಳಿದಿರಿ, ಕೇಂದ್ರದಿಂದ ಕಾಯುತ್ತಿದ್ದೇವೆಂದು, ಅದಕ್ಕಿಂತ ಹೂಳು ಎತ್ತುವ ಕಾರ್ಯಕ್ರಮಕ್ಕೆ ಜಾಸ್ತಿ ಹಣ ಕೊಡಬೇಕು. ಅಥವಾ ಉಪ್ಪು ನೀರಿನ ತಡೆ ಅಣೆಕಟ್ಟಿಗೆ ನಬಾರ್ಡ್ ಯೋಜನೆಯಡಿಯಲ್ಲಿ ಹೆಚ್ಚಿನ ಕಾಮಗಾರಿಯನ್ನು ಕೊಟ್ಟರೆ ಆ ಭಾಗಕ್ಕೆ ಕರಾವಳಿಗೆ ಸ್ವಲ್ಪ ಸಹಾಯವಾಗುತ್ತದೆಂದು ನಾನು ಮಾನ್ಯ ಸಚಿವರ ಗಮನಕ್ಕೆ ತರುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೇ, ನಿಜವಾಗಿಯೂ ಕೆಲವು ಜಿಲ್ಲೆಗಳಲ್ಲಿ ಇಂತಹ ಪರಿಸ್ಥಿತಿ ಇದೆ. ಉದಾಹರಣೆಗೆ ಉಡುಪಿ, ಮಂಗಳೂರು, ಕೂರ್ಗು, ಇಂತಹ ಕಡೆ ಈ ಸಮಸ್ಯೆಗಳು ಇವೆ. ಕೆಲವು ಚಿಕ್ಕಮಗಳೂರು ಭಾಗದಲ್ಲೂ ಕೂಡ ಅಥವಾ ಇದು 4 ಅಂದರೆ ಏನಾಗಿದೆ

ಅಂದರೆ ಇಡೀ ಜಿಲ್ಲೆಯಲ್ಲಿ ನನ್ನ ವ್ಯಾಪ್ತಿಯಲ್ಲಿ ಅಂದರೆ ಮೈನರ್ ಇರಿಗೇಶನ್‌ಗೆ ಬರತಕ್ಕಂಥ ಕೆರೆಗಳು 4. ಉಳಿದ ಎಲ್ಲವೂ ಕೂಡ ಸುಮಾರು 531 ಕೆರೆಗಳು ಜಿಲ್ಲಾ ಪಂಚಾಯತ್‌ಗೆ ಬರುತ್ತವೆ. 4 ಮಾತ್ರ ನಮ್ಮ ಮೈನರ್ ಇರಿಗೇಶನ್ ವ್ಯಾಪ್ತಿಗೆ ಬರುತ್ತವೆ. ತಮಗೆ ಗೊತ್ತಿದ್ದಂತೆ more than 200 ಹೆಕ್ಟರ್ಸ್ within two thousand ಹೆಕ್ಟರ್ನಲ್ಲಿ ನಮಗೆ ಬರುತ್ತವೆ. ಅದಕ್ಕಾಗಿ ಅಲ್ಲಿ ಸಣ್ಣಪುಟ್ಟ ಕೆರೆಗಳು ಇರುವುದರಿಂದ ಅವುಗಳೆಲ್ಲವೂ ಜಿಲ್ಲಾ ಪಂಚಾಯತ್ ವ್ಯಾಪ್ತಿಗೆ ಹೋಗುವುದರಿಂದ ಅದಕ್ಕೆ ವಿಶೇಷವಾಗಿ ಏನಾದರೂ ಜಿಲ್ಲಾ ಪಂಚಾಯತ್ ಅಥವಾ ಆರ್.ಡಿ.ಪಿ.ಆರ್. ಮುಖಾಂತರ ಮಾಡಬೇಕು ಒಂದು, ಇಲ್ಲಾ ಅಂದರೆ ಇತ್ತೀಚೆಗೆ ನಾವು ಜಿಲ್ಲಾ ಪಂಚಾಯತಿಗೆ ವಿಶೇಷವಾಗಿ ಈ ಸಣ್ಣ ನೀರಾವರಿ ಕೆರೆಗೆ ನಬಾರ್ಡ್‌ನಲ್ಲಿ ಒಂದು 20–25 ಕೋಟಿ ರೂಪಾಯಿ ಹಣವನ್ನು ನಾವು ಅವರಿಗೆ ಒದಗಿಸಿದ್ದೇವೆ. ತಾವು ಈ ಪ್ರಸ್ತಾವನೆಯನ್ನು ಆರ್.ಡಿ.ಪಿ.ಆರ್.ಗೆ ಕಳುಹಿಸಿದರೆ ಅಟ್‌ಲಿಸ್ಟ್ ಒಂದು ತಾಲ್ಲೂಕ್‌ಗೆ 10 ಅಥವಾ 15, 20 ಆದರೂ ಅವರು ತೆಗೆದುಕೊಳ್ಳಬಹುದು. ಅದಕ್ಕೆ ನಾವೂ ಕೂಡ ಸಹಾಯ ಮಾಡುತ್ತೇವೆ. ಅಂದರೆ ಮೈನರ್ ಇರಿಗೇಶನ್ ನಲ್ಲಿ ಮಾತ್ರ ಇಷ್ಟು ಬರುತ್ತದೆ. ಈ ಮಾತು ನಾನು ಹೇಳಿದ್ದೇನೆ. ಮತ್ತು ಉಳಿದ ಕೆರೆಗಳು ಸಣ್ಣ ನೀರಾವರಿ ಜಿಲ್ಲಾ ಪಂಚಾಯತ್ ವ್ಯಾಪ್ತಿಯಲ್ಲಿ ಬರುವುದರಿಂದ ಆ ಒಂದು ಆರ್.ಡಿ.ಪಿ.ಆರ್. ಮುಖಾಂತರ ಆ ಒಂದು ಕೆಲಸ ಮಾಡಿಸಿಕೊಳ್ಳಬೇಕು. ತಾವು ಹೇಳಿದಂತೆ ಉಳಿದವು ನಾವು ಈಗಾಗಲೇ ನಾನು ಹೇಳಿದಂತೆ 295 ಕೋಟಿ ರೂಪಾಯಿಗಳು ಒಂದು ಯೋಜನೆಯನ್ನು ಮಾಡಬೇಕು ಎಂದು ಹೇಳಿ ಮಿಸ್ಟರ್ ಭಟ್ ಅವರ ಪ್ರಶ್ನೆಗೆ ಉತ್ತರಿಸುವಾಗ ನಾನು ಏನು ಹೇಳಿದೆ ಸಿಮಿಲರ್‌ಲಿ ಅದರ ಬಗ್ಗೆ ಹೆಚ್ಚಿನ ಮಹತ್ವವನ್ನು ಕೊಟ್ಟು ಮಾಡತಕ್ಕಂಥ ಅವಶ್ಯಕತೆ ಇದೆ. ಅದಕ್ಕೆ ತಾವೂ ಕೂಡ ಸಹಾಯ ಮಾಡಬೇಕು. ಮಾನ್ಯ ಮುಖ್ಯಮಂತ್ರಿಗಳವತಿ ಯಿಂದಲೂ ಕೂಡ ನಾನು ಅಲ್ಲಿ ಕೇಂದ್ರ ಸರ್ಕಾರದ ಮೇಲೆ ಒತ್ತಡ ತಂದು ಇದಕ್ಕೆ ವಿಶೇಷ ಅನುದಾನ ಕೊಡಿಸತಕ್ಕಂಥ ವ್ಯವಸ್ಥೆಯನ್ನು ನಾವೆಲ್ಲರೂ ಕೂಡಿ ಮಾಡೋಣ ಎನ್ನತಕ್ಕಂಥ ಮಾತು ಹೇಳುತ್ತಾ, ಸಾಧ್ಯವಾದಷ್ಟು ಮಟ್ಟಿಗೆ ನಬಾರ್ಡ್‌ನಲ್ಲಿ ಎಷ್ಟು ಅಡ್ಜಸ್ಟ್ ಮಾಡಬೇಕೋ ಅದನ್ನು ಮಾಡಬಹುದು, ಆ ಪ್ರಯತ್ನ ನಾನು ಮಾಡುತ್ತೇನೆ.